ಮೌನವೊಂದನ್ನು ಹೊರತುಪಡಿಸಿ ಬೇರೇನೂ ಇರುವುದಿಲ್ಲ. ಹಾಯೆನಿಸುತ್ತದೆ. ಸಾವಿರಾರು ಕರ್ಕಶಗಳನ್ನೇ ತನ್ನ ಒಡಲಿನಲ್ಲಿ ತುಂಬಿಕೊಂಡಿರುವ ಈ ದಘೂತಿ ನಗರದಲ್ಲಿ ಇಂತಹುದೊಂದು ಮೌನ ಮೂಲೆಯಿದೆಯೆಂಬುದು ಸೋಜಿಗವೆನಿಸುತ್ತದೆ ಅವನಿಗೆ. ಆಗೊಮ್ಮೆ ಈಗೊಮ್ಮೆ ಅವನು ಕಿಟಕಿಯನ್ನೂ ಪೂರಾ ತೆಗೆದು ಎರಡು ಮನೆಗಳ ನಡುವಿನ ಈ ನಿಶಬ್ದ ಓಣಿಯ ಮೌನವನ್ನೇ ಕೇಳುತ್ತ ನಿಂತಾಗ, ಆ ಮೌನಕ್ಕೂ ಎಲ್ಲ ಸದ್ದುಗಳನ್ನೂ ನುಂಗಿ ಉಳಿದುಕೊಂಡಂತಹ ದನಿಯೊಂದಿರುವಂತೆ ಭಾಸವಾಗುತ್ತದೆ. ಹಿಂದು ಮುಂದಿನ ಎರಡೂ ಬೀದಿಗಳಲ್ಲಿ ಹುಟ್ಟಿ ಊರು ತಿರುಗಲೆಂದು ಓಡುತ್ತ ಹೊರಟ ಧ್ವನಿಗಳು ಈ ಓಣಿಯಂತಹ ಜಾಗೆಯನ್ನು ತಲುಪಿದಾಗ ಗಕ್ಕನೇ ನಿಂತು, ಮೌನವಾಗಿ ದಾಟಿ ಮತ್ತೆ ಗದ್ದಲ ಮಾಡಿಕೊಂಡು ಮುಂದುವರೆಯುತ್ತವೇನೋ ಎಂದೆಲ್ಲ ಯೋಚಿಸುವ ಅನಂತುವಿಗೆ ಆ ನೀರವದಲ್ಲಿ ಊರಿನ ನೆನಪು ಬಹಳವೇ ಕಾಡುತ್ತವೆ. ಎಳವೆಯಲ್ಲಿ ಸಂಜೆ ಶಾಲೆಯಿಂದ ಮರಳಿದವನನ್ನು ಅಮ್ಮ ಹಿತ್ತಲಿನ ಬಟ್ಟೆಒಗೆಯುವ ಕಲ್ಲಿನ ಮೇಲೆ ಓದಲು ಕೂಡಿಸಿ ಕೈತೋಟಕ್ಕೆ ನೀರು ಹಾಕುತ್ತಾ, ಹರವೆ, ಸಂಬಾರ, ಮೆಂತೆ ಸೊಪ್ಪುಗಳ ಪಾತಿ ಒಪ್ಪ ಮಾಡುತ್ತಾ, ಕಳೆ ತೆಗೆಯುತ್ತಾ ಇರುತ್ತಿದ್ದಳು. ಅಪ್ಪನೇನಾದರೂ ಬೇಗ ಬಂದರೆ, ಅನಂತುವನ್ನು ತೋಟದಂಚಿನ ಕುಳ್ಳಗಿನ ರಾಮಫಲದ ಮರದ ತೊಂಗೆಯೊಂದರ ಮೇಲೆ ಹತ್ತಿ ಕೂರಿಸಿ, ದೂರದ ಬೆಟ್ಟದೆಡೆಗೆ ಬೊಟ್ಟು ಮಾಡಿ, 'ಅಲ್ಲಿ ನೋಡು ಅಣ್ಣಾ, ಅದು ಕುದುರೆಮುಖದ ಬೆಟ್ಟ' ಎಂದಾಗೆಲ್ಲ ಅನಂತುವಿಗೆ ಸರಿಯಾಗಿ ಕಾಣಿಸದಿದ್ದರೂ ಬೆರಗಾಗುತ್ತಿತ್ತು. ಆಗಲೂ ಇಂಥದ್ದೇ ಮೌನವಲ್ಲದ ಮೌನವೊಂದು ಅನಂತುವನ್ನು ಸುತ್ತುವರೆಯುತ್ತಿತ್ತು. ದೂರದಲ್ಲಿ ಕಾಣಿಸದೆಯೂ ಕಾಣಿಸುವ ಕುದುರೆಮುಖ, ಸುತ್ತ ತೋಟದ ಮರಗಿಡಗಳು, ಒಂದು ಪಕ್ಕ ಕಾಣಿಸುತ್ತಿದ್ದ ಮನೆಯ ಮೇಲಿನ ಹೆಂಚಿನ ಮಾಡು, ಅದರಾಚೆಗಿನ ರಸ್ತೆ, ಮತ್ತೊಂದು ಪಕ್ಕದಲ್ಲಿ ಪಕ್ಕದ ಮನೆಯ ಹಿತ್ತಿಲುಗಳೆಲ್ಲ ಹೊಸತೇ ಕೋನದಿಂದ ಕಂಡು ಕೆಳಗಿನದ್ದಕ್ಕಿಂತ ಭಿನ್ನವಾದ ಪ್ರಪಂಚವೊಂದು ಗೋಚರಿಸುತ್ತಿತ್ತು. ಅಂತಹುದೇ ಹೊಸ ಲೋಕದ, ತನ್ನೂರಿನ ತುಣುಕೊಂದು, ಮನೆ ಪಕ್ಕದ ಓಣಿಯಂಥ ಜಾಗೆಯಲ್ಲಿದೆ ಎನಿಸಿ ಹಿತವೆನಿಸುತ್ತಿತ್ತು. ಅಷ್ಟರ ಮಟ್ಟಿಗೆ ಊರು ಮನೆಗಳೆಂಬ ಸಂಗತಿಗಳನ್ನು ಧೇನಿಸುತ್ತಲೇ ಇರುತ್ತಿದ್ದ ಅನಂತುವಿನಲ್ಲಿ, ತನ್ನ ಭಾವಲೋಕಕ್ಕೆ ಸಂಬಂಧಿಸಿದ ವಿಚಾರಗಳೆಲ್ಲದರ ಕೇಂದ್ರದಂತಿದ್ದ ತನ್ನ ಮನೆಯೇ ಈಗಿಲ್ಲ ಮತ್ತು ಅದು ಇಲ್ಲವಾಗಿ ಬಹಳ ಕಾಲವೇ ಆಯಿತು ಎಂಬ ಸುದ್ದಿ ವಿಚಿತ್ರ ಗೊಂದಲ ಮೂಡಿಸಿತ್ತು.

ಅದೇ ಗುಂಗಿನಲ್ಲಿದ್ದವನು ಮರುದಿನ ಬೇಗನೇ ಆಫೀಸು ತಲುಪಿದ. ಕೆಲಸದ ಸಮಯದಲ್ಲಿ ಸದಾಕಾಲ ಜಂಗುಳಿ ಗದ್ದಲವೇ ತುಂಬಿಕೊಂಡಿರುತ್ತಿದ್ದ ಬ್ರಾಂಚು ಮೌನವಾಗಿತ್ತು. ಕಿಟಕಿ ಪಕ್ಕದ ಅವನ ಡೆಸ್ಕಿನ ಮೇಲೆ ಮುಚ್ಚಿದ ಕರ್ಟನ್ನಿನ ಸಂದಿಯಿಂದ ಒಳಬರುತ್ತಿದ್ದ ಸೂರ್ಯನ ಪುಟ್ಟ ಪುಟ್ಟ ಕಿರಣಗಳು ನೆರಳು ಬೆಳಕಿನ ಪಟ್ಟೆಗಳನ್ನು ಬಿಡಿಸಿದ್ದುವು. ಹಗೂರವಾಗಿ ಕಿಟಕಿಯ ಬ್ಲೈಂಡ್ಸುಗಳನ್ನು ಸರಿಸುತ್ತಿದ್ದಂತೆಯೇ ಟಿಂಟೆಡ್ ಗ್ಲಾಸಿನಾಚೆಯಿಂದ ತೆಳು ನೇರಳೆ ಬಣ್ಣದ ಬೆಳಕು ತೂರಿ ಬಂದು ಇವನ ಸಮೇತ ಕೋಣೆಯ ಆ ಪಕ್ಕದ ಡೆಸ್ಕು, ಚೇರು, ಕಂಪ್ಯೂಟರು, ಪೆನ್ನುಗಳು, ಫೈಲುಗಳು, ಇಂಕು ಪ್ಯಾಡು, ಸೀಲುಗಳಿಗೆಲ್ಲ ಬಿಸಿಲಿನ ಸ್ನಾನ ಮಾಡಿಸಿತು. ಅದೇ ಹೊತ್ತಿಗೆ ಅಟೆಂಡರನೊಬ್ಬ ಆ ಬದಿಯ ಪರದೆಗಳನ್ನೂ ಸರಿಸಿ ಕಿಟಕಿಯಾಚೆಗಿದ್ದ ಸರಕಾರೀ ಮ್ಯೂಸಿಯಮ್ಮಿನ ಕೆಂಪು ಕಟ್ಟಡ ಕಂಡಿತು. ಮುಂಜಾವಿನ ಬಿಸಿಲಿನಲ್ಲಿ ಮೀಯುತ್ತಿದ್ದ ಆ ಹಳೆಗಾಲದ ಕಟ್ಟಡ ಕಬ್ಬನ್ ಪಾರ್ಕಿನ ಹಸಿರಿನ ಹಿನ್ನೆಲೆಯಲ್ಲಿ ಮನೋಹರವಾಗಿ ಕಾಣಿಸಿ ಅನಂತುವಿಗೆ ಒಂದು ಕ್ಷಣ ಹಾಯೆನಿಸಿತು. ಅವನು ಕೂರುವ ಡೆಸ್ಕಿನ ಪಕ್ಕದ ಕಿಟಕಿಯ ಆಚೆ ಪಕ್ಕದಲ್ಲೊಂದು ಪುಟ್ಟ ಬಾಲ್ಕನಿಯಿತ್ತು. ಕುಂಡೆ ತುರಿಸಿಕೊಳ್ಳಲೂ ಪುರಸೊತ್ತಿಲ್ಲದಿರುವ ಆ ಕಚೇರಿಯಲ್ಲಿ ಆ ಬಾಲ್ಕನಿಗೆ ಹೋಗುವವರಿಲ್ಲದ ಕಾರಣ, ಹಳೆಯ ಬೇಡಾದ ಸಾಮಾನುಗಳನ್ನೆಲ್ಲ ಅಲ್ಲಿ ಒಟ್ಟಿರುತ್ತಿದ್ದರು. ಬಾಲ್ಕನಿಯ ಒಂದು ಪಕ್ಕದ ಬಳಿ ಬಸವನ ಪಾದದ ಮರವೊಂದರ ಟೊಂಗೆಗಳು ಚಾಚಿಕೊಂಡಿದ್ದವು, ಸಾಮಾನ್ಯಕ್ಕಿಂತ ತುಸು ಎತ್ತರವೇ ಇದ್ದ ಆ ಮರದ ಕಡು ಹಸಿರಿನ ಹಸುವಿನ ಗೊರಸಿನಾಕಾರದ ಎಲೆಗಳ ನೆರಳು ಗಾಜಿನ ಕಿಟಕಿಯ ಮೇಲೆ ಬಿದ್ದು ಇವನ ಡೆಸ್ಕಿನ ಮೇಲೆ ಚೆಂದದ ಚಿತಾರಗಳನ್ನು ಮೂಡಿಸುತ್ತಿದ್ದುವು. ಬಾಲ್ಕನಿಗೆ ಹೋಗುತ್ತಿದ್ದ ಕೆಲವೇ ಜನರಲ್ಲಿ ಒಬ್ಬನಾಗಿದ್ದ ಅನಂತುವಿಗೆ ಅಲ್ಲಿಯೂ ತನಗಿಷ್ಟವಾಗುವ ಮೌನವೊಂದು ದಕ್ಕಿಬಿಡುತ್ತಿತ್ತು. ಪ್ಯಾಂಟ್ರಿಯಿಂದ ಕಾಫಿ ತೆಗೆದುಕೊಂಡು ಆ ಬಾಲ್ಕನಿಯ ಅಂಚಿಗೆ ಆತುಕೊಂಡು ನಿಂತವನಿಗೆ ಕೆಳಗಿನ ಪಾರ್ಕಿಂಗು ಲಾಟಿನ ಆಸ್ಬೆಸ್ಟಾಸ್ ಸೂರಿನ ಮೇಲೆ ಹಬ್ಬಿಕೊಂಡಿದ್ದ ಕನಕಾಂಬರ ಬಣ್ಣದ ಚೀಟಿ ಹೂವಿನ ಬಳ್ಳಿ ಕಾಣಿಸಿತು. ಆ ಸೂರನ್ನಷ್ಟೇ ಅಲ್ಲದೇ, ಆ ಬಳ್ಳಿಯು ಪಕ್ಕದಲ್ಲೇ ಇದ್ದ ಸಣ್ಣ ಅಪಾರ್ಟುಮೆಂಟಿಗೂ ಹಬ್ಬಿಕೊಂಡಿತ್ತು. ಕೊಂಚ ಹೊತ್ತು ಅಲ್ಲಿನ ತಣ್ಣನೆ ಏಕಾಂತದಲ್ಲಿ ಮೈಮರೆತು ನಿಂತ. ಹಸಿರು ಪಾಚಿಗಟ್ಟಿದ್ದ ಪಾರ್ಕಿಂಗ್ ಲಾಟಿನ ಸೂರಿನ ಮೇಲೆ ಅಕ್ಷಯವಾಗಿ ಹಬ್ಬಿಕೊಂಡಿದ್ದ ಕನಕಾಂಬರ ಬಣ್ಣದ ಹೂವುಗಳು ಮತ್ತು ಆಗಲೇ ಬೀಸಿದ ತಣ್ಣನೆ ಗಾಳಿ ಅವನಿಗೆ ಮತ್ತೇನನ್ನೋ ನೆನಪು ಮಾಡಿಕೊಟ್ಟವು. ಅದೇನು ಎಂದು ಅರಿವಾಗುತ್ತಲೇ ಮಂಕಾದ ಅನಂತು, ಆಫೀಸಿನೊಳಕ್ಕೆ ಹೋಗಿಬಿಟ್ಟ.



ಮಂಗಳೂರು ಹೆಂಚಿನ, ಮಣ್ಣಿನ ಗೋಡೆಯ ತನ್ನ ಮಲೆನಾಡು ಸೀಮೆಯ ಮನೆಯ ಸುತ್ತಲೂ ಶೀತಲವಾದ ಏಕಾಂತವಿರುತ್ತಿತ್ತು. ಮನೆಯ ಜಗುಲಿಯ ಎರಡು ಪಾರ್ಶ್ವಗಳಲ್ಲಿದ್ದ ಕೆಂಪು ಪೈಂಟು ಬಳಿದ ಸೀಟುಗಳಂತಹ ಕಟ್ಟೆಗಳ ಮೇಲೆ ಓದುತ್ತಲೋ, ಆಡುತ್ತಲೋ ಅನಂತುವಿನ ದಿನಗಳು ಕಳೆಯುತ್ತಿದ್ದುವು, ಜಗುಲಿಯ ಮುಂದಿನ ಮೆಟ್ಟಿಲಿನ ಮೇಲೆ ತುಸು ಮುಂದೆ ಚಾಚಿಕೊಂಡಿದ್ದ ಹೆಂಚಿನ ನೆರಳು ಹಿತವಾಗಿ ಹರಡಿಕೊಂಡಿರುತ್ತಿತ್ತು. ಅವರದ್ದು ರಸ್ತೆ ಪಕ್ಕದ ಮನೆಯಾಗಿದ್ದರೂ, ಪಕ್ಕದವರೆಡು ಮನೆಗಳಿಗಿಂತ ಸ್ವಲ್ಪ ಹಿಂಭಾಗದಲ್ಲಿದ್ದುದರಿಂದ ಉಂಟಾದ ಜಾಗೆಯಲ್ಲಿ ಸದಾಕಾಲ ಮುಸುಕು ಹಾಕಿಕೊಂಡಿರುತ್ತಿದ್ದ ಕಾರೊಂದು ಕಾಯಿಲೆ ಹಿಡಿದ ಬೆಕ್ಕಿನಂತೆ ನಿಂತಿರುತ್ತಿತ್ತು. ಅವನಿಗೆ ನೆನಪಿರುವಂತೆ, ಆ ಕಾರು ಅವರಿಗೆ ಸೇರಿದ್ದಲ್ಲ, ಆದರೂ ಅಲ್ಲಿರುತ್ತಿತ್ತು! ಅದು ಯಾವ ಕಾರು, ಯಾರ ಕಾರು, ಹೋಗಲಿ ಅದು ನೋಡುವುದಕ್ಕೆ ಹೇಗಿದೆ? ಯಾವ ಬಣ್ಣ? ಅಲ್ಲಿ ಅದು ಯಾಕೆ ನಿಂತಿದೆ? ಒಳಗಿರುವುದು ಕಾರೇ ಹೌದೋ? ಊಹೂಂ! ಆ ಮನೆಯಲ್ಲಿರುವ ತನಕ ಅವನಿಗೆ ಅದರ ಬಗ್ಗೆ ಏನೂ ತಿಳಿದಿರಲಿಲ್ಲ, ಮನೆಗೆ ಸಂಬಂಧಿಸಿದ ಇತರ ಸ್ಥಿರ ವಸ್ತುಗಳಲ್ಲಿ ಆ ಅನಾಮಿಕ ಕಾರೂ ಕೂಡ ಒಂದಾಗಿತ್ತು. ಅವರು ಮನೆ ಖಾಲಿ ಮಾಡುತ್ತಿದ್ದಾಗಲೂ ಅದರ ಬಗ್ಗೆ ಯಾವ ಚರ್ಚೆ ನಡೆದ ನೆನಪು ಅನಂತುವಿಗಿಲ್ಲ. ಊರು ಬಿಡುವ ದಿನ ಅವರಿದ್ದ ಟೆಂಪೋವಿನಿಂದ ಮನೆಯೆಡೆಗೆ ಹೊರಳಿ ನೋಡಿದಾಗ ಕೊನೆಯದಾಗಿ ಅವನಿಗೆ ಆ ಕಾರಷ್ಟೇ ಕಾಣಿಸಿತ್ತು! ಊರು ಬಿಟ್ಟ ಮೇಲೆ ಸ್ವಲ್ಪ ಕಾಲವಿದ್ದ ನಮ್ಮ ಕಾರು ಎಂಬ ನೆನಪು, ಕಾಲ ಕಳೆದಂತೆ ಹಳೆಯ ಡೈರಿಯೊಳಗೆ ಬರೆದು ಮರೆತ ಯಾರೋ ಪರಿಚಯದವರ ವಿಳಾಸದಂತೆ ಮಾಸಿ ಹೋಗಿತ್ತು! ಕಾರಿನ ಪಕ್ಕದಲ್ಲೊಂದು ಸಣಕಲು ನಾಗ ಸಂಪಿಗೆಯ ಮರವಿರುತ್ತಿತ್ತು ಮತ್ತು ಅದರಿಂದ ಉದುರಿದ ಒಣ ಮತ್ತು ಹಸಿ ಬಿಳಿ ಗುಲಾಲಿ ಮಿಶ್ರ ಹೂಗಳು ಕಾರಿನ ಸುತ್ತ ಮಂದವಾದ ಸಿಹಿ ಘಮ ಬೀರುತ್ತಾ ಬಿದ್ದುಕೊಂಡಿರುತ್ತಿದ್ದವು. ಹೂವು ಮರದಿಂದ ಉದುರಿದುವೋ, ಕಾರಿನಿಂದಲೇ ಹುಟ್ಟಿದುವೋ ಎಂಬ ಅನುಮಾನ ಬರುವಷ್ಟು ಆ ಮರ ಮತ್ತು ಕಾರು ಒಂದನ್ನೊಂದು ಬೆಸೆದುಕೊಂಡಂತಿರುತ್ತಿದ್ದುವು. ಆ ಜಾಗೆಯಲ್ಲಿ ಅಯಾಚಿತ ಮೌನವೊಂದು ಹಬ್ಬಿರುತ್ತಿತ್ತು. ಆ ಮೌನ ಮತ್ತು ಮನೆಯೆದುರಿನ ಆ ಏಕಾಂತದ ತುಣುಕುಗಳೇ ತಾನು ಹೋದ ಊರುಗಳಲ್ಲೆಲ್ಲ ತನ್ನನ್ನು ಕಾದಿವೆ ಎಂದು ಅನಂತುವಿಗೆ ಬಲವಾಗಿ ಅನಿಸುತ್ತಿತ್ತು. ತನ್ನ ಮನೆ ಪಕ್ಕದ ಓಣಿ, ಆಫೀಸಿನ ಬಾಲ್ಕನಿ ಮೊದಲಾದ ತನ್ನ ಮೌನ ಮೂಲೆಗಳನ್ನೂ ಆ ತುಣುಕುಗಳೇ ಕಾಪಾಡಿಕೊಂಡು ಬಂದಿವೆ ಎಂದೂ ಅನಿಸುತ್ತಿತ್ತು. ಈಗ ಆ ನಂಬಿಕೆ ಕದಡಿದಂತಾಗಿ ಅವನ ಮನಸ್ಸು ಹತೋಟಿ ತಪ್ಪಿತ್ತು.

ಆಫೀಸಿನಲ್ಲಿ ಆ ದಿನ ಬರೀ ಊರಿನದ್ದೇ ಮಾತು! ಇನ್ನೇನು ಎರಡು ದಿನ ಕಳೆದರೆ ದೀಪಾವಳಿಯ ರಜೆ ಬರುವುದಿತ್ತು. ಬುಧವಾರ ನರಕ ಚತುರ್ದಶಿ, ಶುಕ್ರವಾರ ಬಲಿಪಾಡ್ಯಮಿ ಮತ್ತು ಮರುದಿನ ನಾಲ್ಕನೇ ಶನಿವಾರ! ಹೀಗಾಗಿ ನಡುವೆ ರಜೆ ಇಲ್ಲದ ಗುರುವಾರ ಸೀಎಲ್ಲು ಹಾಕಿ ಊರಿಗೆ